

## ಕಾಸ್ಮೆಟಿಕ್ ಚಿಕಿತ್ಸೆಯ ಆಯಾಮಗಳು

- ಕನ್ಯಾಪೊರೆಗೆ ಹಾನಿಯಾಗಿದ್ದರೆ ಅದನ್ನು ಸರಿಪಡಿಸಬಹುದು. ಚಾರಣ, ಸೈಕ್ಲಿಂಗ್, ಲೈಂಗಿಕ ಕ್ರಿಯೆಯಿಂದ ಕನ್ಯಾಪೊರೆ ಹರಿದು ಹೋಗಿದ್ದು, ಈ ಭಾಗಕ್ಕೆ ಗಾಸಿಯಾಗಿದ್ದರೆ ಅದನ್ನು ಮತ್ತೆ ಮೊದಲಿನ ಹಾಗೆ ಮಾಡುವ ಸಣ್ಣ ಶಸ್ತ್ರಚಿಕಿತ್ಸೆ ಇದು.
- ಕೆಲವು ಮಹಿಳೆಯರಿಗೆ ಹೊಟ್ಟೆಯ ಕೆಳಭಾಗ, ಪ್ಯುಬಿಕ್ಸ್ ಭಾಗದಲ್ಲಿ ಹೆಚ್ಚಾಗಿ ಬೊಜ್ಜು ಶೇಖರವಾಗಿರುತ್ತದೆ. ಇದನ್ನು ತೆಗೆಸಿಕೊಳ್ಳಲು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬಹುದು.
- ಸೌಂದರ್ಯಪ್ರಜ್ಞೆ ಇರುವ ಮಹಿಳೆಯರು, ಬಿಕಿನಿ ಹಾಕಿಕೊಂಡು ಓಡಾಡಬೇಕೆಂದು ಎನಿಸಿರುವ ಸೆಲೆಬ್ರಿಟಿ ಹಾಗೂ ಆಧುನಿಕ ಮನೋಭಾವದ ಮಹಿಳೆಯರು ಚಿಕಿತ್ಸೆ ಪಡೆಯುವುದು ಈಗೀಗ ಬೆಳಕಿಗೆ ಬರುತ್ತಿದೆ.
- ವಯಸ್ಸು ಆದಂತೆ ಕೆಲ ಮಹಿಳೆಯರಲ್ಲಿ ಮೂತ್ರದ ನಿಯಂತ್ರಣ ಇರುವುದಿಲ್ಲ. ಕೆಮ್ಮಿದಾಗ, ಜೋರಾಗಿ ನಕ್ಕಾಗ, ವೇಗವಾಗಿ ನಡೆದಾಗ, ಮೂತ್ರ ತನ್ನಿಂದತಾನಾಗಿ ಬಂದು ಬಿಡುತ್ತದೆ. ಇಂಥವರಿಗೂ ಕಾಸ್ಮೆಟಿಕ್ ಗೈನೆಕಾಲಜಿ ಚಿಕಿತ್ಸೆ ಪರಿಣಾಮಕಾರಿ.
- ಈ ಪ್ರಕ್ರಿಯೆಯಲ್ಲಿ ಲೇಸರ್ ಚಿಕಿತ್ಸೆ, ಪ್ಲೇಟ್‌ಲೆಟ್ ರಿಚ್ ಪ್ಲಾಸ್ಮ ಹಾಗೂ ಪುನರುಜ್ಜೀವನಗೊಳಿಸುವ ಔಷಧಿಯನ್ನು ಇಂಜೆಕ್ಷನ್ ಮೂಲಕ ಕೊಡಲಾಗುತ್ತದೆ. ಇದರಿಂದ ಅಡ್ಡಪರಿಣಾಮಗಳೆಲ್ಲ ಎಂದೂ ವೈದ್ಯರು ಭರವಸೆ ನೀಡಿದ್ದು, ಸೌಂದರ್ಯದ ಮರುಪೂರಣ ಬಯಸುವ ಮಹಿಳೆಯರಿಗೆ 'ಕಾಸ್ಮೆಟಿಕ್ ಗೈನೆಕಾಲಜಿ' ಉಪಯುಕ್ತ.



ಹೆರಿಗೆಯ ನಂತರದ ಲೈಂಗಿಕ ಚಟುವಟಿಕೆ ಸುಗಮವಾಗುತ್ತದೆ. ದೇಹವು ಕಿರಿಯ ಅಥವಾ ಹೆಚ್ಚು ಕಲಾತ್ಮಕವಾಗಿ ಹಿತಕರವಾಗಿ ಕಾಣುವಂತೆ ಮಾಡಲು ಜನನಾಂಗಗಳನ್ನು ಪುನರುಜ್ಜೀವನಗೊಳಿಸಲಾಗುತ್ತದೆ. ಬಾಹ್ಯ ಜನನಾಂಗವನ್ನು ಕಷ್ಟಕರವಾದ ಹೆರಿಗೆಯ ನಂತರವೂ ಹೆಚ್ಚು ನೈಸರ್ಗಿಕವಾಗಿ ಇರುವಂತೆ ಕಾಣಲು ಸಹಾಯ ಮಾಡುತ್ತದೆ.

### ಜನನಾಂಗಕ್ಕೆ ಬೊಟೊಕ್ಸ್

'ಮುಖದ ಮೇಲೆ ಕಪ್ಪುಕಲೆ ಮೂಡಿದರೆ, ಮೊಡವೆ ಬಂದರೆ, ಚರ್ಮದ ಸಮಸ್ಯೆ ಬಂದಾಗ ಬೊಟೊಕ್ಸ್ ಚಿಕಿತ್ಸೆಯನ್ನು ಸೌಂದರ್ಯಪ್ರಿಯರು ಮಾಡಿಸಿಕೊಳ್ಳುತ್ತಾರೆ. ಅದೇ ರೀತಿ ಜನನಾಂಗದ ಭಾಗಕ್ಕೂ ತ್ವಚೆಯ ಪುನರುಜ್ಜೀವಕ್ಕೆ ಬೊಟೊಕ್ಸ್ ಚಿಕಿತ್ಸೆ ಮಾಡುವುದು ಕಾಸ್ಮೆಟಿಕ್ ಗೈನೆಕಾಲಜಿಯ ಒಂದು ಭಾಗ. ಇಲ್ಲಿ ಲೇಸರ್ ಥೆರಪಿ, ಮ್ಯಾಗ್ನೆಟಿಕ್ ವೇವ್ ಚಿಕಿತ್ಸೆ, ವಜೈನೊಪ್ಲಾಸ್ಟಿ ಮುಂತಾದ ಚಿಕಿತ್ಸೆ ನೀಡಲಾಗುವುದು' ಎಂದು ಹೇಳುತ್ತಾರೆ ಬೆಂಗಳೂರಿನ ಗಿರಿನಗರದಲ್ಲಿ ರಾಧಾಕೃಷ್ಣ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆಯಾಗಿರುವ ಡಾ. ವಿದ್ಯಾ ಭಟ್.

'ಸಣ್ಣ ವಯಸ್ಸಿನವರಿಗೆ ಈ ಚಿಕಿತ್ಸೆಯಿಂದ ಯಾವುದೇ ತೊಂದರೆ ಇಲ್ಲ. ಆದರೆ 45 ದಾಟಿದ ಮಹಿಳೆಯರಿಗೆ ಕಾಸ್ಮೆಟಿಕ್ ಚಿಕಿತ್ಸೆ ಮಾಡಬೇಕಾದರೆ ಅನಿಯಂತ್ರಿತ ಮೂತ್ರ, ಬಿಳಿ ಮುಟ್ಟು ಮುಂತಾದ ಕೆಲವೊಂದು ಸಮಸ್ಯೆಗಳು ಎದುರಾಗುತ್ತವೆ. ಇವೆಲ್ಲವನ್ನೂ ನಿವಾರಿಸಿದ ಬಳಿಕವೇ ಈ ಚಿಕಿತ್ಸೆ ನೀಡಬೇಕಾಗುತ್ತದೆ' ಎನ್ನುತ್ತಾರೆ ಡಾ. ವಿದ್ಯಾ

'ಈ ಚಿಕಿತ್ಸೆಯಿಂದ ಯಾವುದೇ ಅಡ್ಡಪರಿಣಾಮ ಉಂಟಾಗುವುದಿಲ್ಲ. ಆರೋಗ್ಯ ಸಮಸ್ಯೆಯೂ ಉದ್ಭವಿಸುವುದಿಲ್ಲ, ರಕ್ತ ಹರಿದು ಹೋಗುವುದಿಲ್ಲ' ಎನ್ನುವ ಅವರು, 'ಲೇಸರ್, ಬೊಟೊಕ್ಸ್ ಥೆರಪಿಗಳನ್ನು ಯಾವಾಗ, ಎಷ್ಟು ಸಲ ಬೇಕಾದರೂ ಮಾಡಿಸಿಕೊಳ್ಳಬಹುದು' ಎನ್ನುತ್ತಾರೆ.

'ಕಾಸ್ಮೆಟಿಕ್ ಗೈನೆಕಾಲಜಿ ಚಿಕಿತ್ಸೆಗೆ ಅಂದಾಜು 80 ಸಾವಿರ ರೂಪಾಯಿಗಳಿಂದ ಒಂದು ಲಕ್ಷ ರೂಪಾಯಿವರೆಗೂ ಖರ್ಚು ಬರಬಹುದು. ಇದು ಯಾವ ರೀತಿಯ ಚಿಕಿತ್ಸೆಯನ್ನು ಅವಲಂಬಿಸಿದೆ ಎನ್ನುವುದರ ಮೇಲೆ ದರ ನಿಗದಿಯಾಗುತ್ತದೆ. ಅಮೆರಿಕ, ದುಬೈಗಳಂಥ ದೇಶಗಳಲ್ಲಿ ಇದು ಜನಪ್ರಿಯವಾಗಿದೆ. ಭಾರತದಲ್ಲೂ ಮೆಟ್ರೊಪಾಲಿಟನ್ ನಗರಗಳಲ್ಲಿ ಈ ಚಿಕಿತ್ಸೆಯನ್ನು ಮಾಡಿಸಿಕೊಳ್ಳುವ ಮಹಿಳೆಯರ ಸಂಖ್ಯೆ ಹೆಚ್ಚಿದೆ. ಈ ಎಲ್ಲ ಭಾಗಗಳಲ್ಲಿ ಕಾಸ್ಮೆಟಿಕ್ ಗೈನೆಕಾಲಜಿಯನ್ನು ಅಕಡೆಮಿಕ್ ಆಗಿ ಕಲಿಯುವ, ಕಲಿಸುವ ಪರಿಪಾಟ ಹೆಚ್ಚಾಗಿದ್ದು, ಇದಕ್ಕಾಗಿ ಕೋರ್ಸ್ ಅನ್ನೇ ಆರಂಭಿಸಲಾಗಿದೆ.

ಬೆಂಗಳೂರಿನಲ್ಲೂ ಕಾಸ್ಮೆಟಿಕ್ ಗೈನೆಕಾಲಜಿ ಜನಪ್ರಿಯವಾಗುತ್ತಿದ್ದು, ನಮ್ಮ ಆಸ್ಪತ್ರೆಯಲ್ಲಿ ಇದು ಲಭ್ಯವಿದೆ. ವೈದ್ಯರಿಗೆ ಕಲಿಸುವ ಕೆಲಸವನ್ನೂ ಮಾಡುತ್ತಿದ್ದೇನೆ' ಎಂದು ಹೇಳುತ್ತಾರೆ ಈ ವೈದ್ಯೆ.

### ಕಾಸ್ಮೆಟಿಕ್ ಗೈನೆಕಾಲಜಿ ಕೋರ್ಸ್

ಈ ಹೊಸ ಬಗೆಯ ಚಿಕಿತ್ಸೆಯನ್ನು ಫ್ಲೋರಿಡಾದ ಪ್ರಸಿದ್ಧ ಕಾಸ್ಮೆಟಿಕ್ ಸ್ತ್ರೀರೋಗ ತಜ್ಞ ಡಾ. ಓಸ್ಟ್ರೆಜೆನ್ಸ್ಕಿ ಅವರು ಮೊತ್ತಮೊದಲು ಪ್ರಾರಂಭಿಸಿದರು. ಬಳಿಕ ಅಮೆರಿಕ, ಇಂಗ್ಲೆಂಡ್, ಯೂರೋಪ್ ದೇಶಗಳಲ್ಲಿ ಈ ಚಿಕಿತ್ಸೆ ಜನಪ್ರಿಯಗೊಳ್ಳಲಾರಂಭಿಸಿತು.

ಭಾರತದಲ್ಲೂ ಮೆಟ್ರೊಪಾಲಿಟನ್ ನಗರಗಳಲ್ಲಿ ಈ ಚಿಕಿತ್ಸೆ ಲಭ್ಯ. ದೆಹಲಿಯಲ್ಲಿರುವ 'ಬ್ಯಾಕ್‌ಸ್ಟೇಜ್ ಅಕಾಡೆಮಿ'ಯಲ್ಲಿ ಡಾ. ಗೀತಾ ಅರೋರಾ ಅವರು 'ಕಾಸ್ಮೆಟಿಕ್ ಗೈನೆಕಾಲಜಿ' ಬಗ್ಗೆ ಹೊಸ ಕೋರ್ಸ್ ಅನ್ನೇ ಆರಂಭಿಸಿದ್ದಾರೆ.

ಇದು ಬ್ರಿಟನ್‌ನಲ್ಲಿರುವ ಇಂಟರ್‌ನ್ಯಾಷನಲ್ ಬೋರ್ಡ್ ಆಫ್ ಎಜುಕೇಶನ್, ಸೌಂದರ್ಯಶಾಸ್ತ್ರ ಮತ್ತು ಕಾಸ್ಮೆಟಾಲಜಿ ಇಲಾಖೆಯ ಮಾನ್ಯತೆಯನ್ನೂ ಪಡೆದಿದೆ.

ದೆಹಲಿಯಲ್ಲಿರುವ ಬ್ಯಾಕ್‌ಸ್ಟೇಜ್ ಅಕಾಡೆಮಿಯಲ್ಲಿ ನಡೆಸುವ ಕಾಸ್ಮೆಟಿಕ್ ಗೈನೆಕಾಲಜಿ ಕೋರ್ಸ್‌ನಲ್ಲಿ, ಯೋನಿ ಪುನರುಜ್ಜೀವನ, ಮೂತ್ರದ ಅಸಂಯಮ, ಟಮ್ಮಿ ಟಕ್, ಸ್ಟ್ರೆಚ್ ಮಾರ್ಕ್ಸ್ ಚಿಕಿತ್ಸೆ ಹಾಗೂ ಸ್ತನ ಲಿಫ್ಟ್ ಮುಂತಾದ ವಿಷಯಗಳನ್ನು ಅಧ್ಯಯನ ಮಾಡಬಹುದು.

ಪ್ರತಿಕ್ರಿಯಿಸಿ: feedback@sudha.co.in